## ದಿನಾಂಕ: 13.6.2013ರಂದು ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದ ಆಯುಕ್ತರುಗಳು ಮತ್ತು ಅಧಿಕಾರಿಗಳ ಪಟ್ಟಿಯನ್ನು ಅನುಭಂದ 'ಅ'ನಲ್ಲಿ ತಿಳಿಸಲಾಗಿದೆ.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

**ವಿಷಯ : 1 ಮುಂದೂಡಿರವ ಪ್ರಕರಣಗಳನ್ನು ಪುನರ್ ವಿಚಾರಣೆ ನಡೆಸುವ ಬಗ್ಗೆ :**

ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಯವರು 2007–2008–2009ನೇ ಸಾಲಿನಲ್ಲಿ ಕೆಲವು ಪ್ರಕರಣಗಳನ್ನು ಮುಂದೂಡಿ ಪುನರ್ ವಿಚಾರಣೆ ನಡೆಸದೆ ಹಾಗೇ ಬಾಕಿ ಇರುವ ಅಪೀಲುಗಳಿದ್ದು ಅದಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿದ ತಃಖ್ತೆಯನ್ನು ಸಭೆಯ ಮುಂದಿಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಎಂ.ಆರ್.ಪೂಜಾರ್‌ರವರು 5913 ರಿಂದ 5929, 5941 ರಿಂದ 5950 ಮತ್ತು 6028 ರಿಂದ 6043ರವರೆಗಿನ 48 ಅಪೀಲು ಪ್ರಕರಣಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ನೀಡುವಂತೆ ಸೂಚಿಸಿದರು. ಇದಕ್ಕೆ ಉತ್ತರಿಸಿದ ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್ ಶ್ರೀನಿವಾಸ್‌ರವರು ಕೆಲವು ಕಡತಗಳು ಲಭ್ಯವಾಗುತ್ತಿಲ್ಲವೆಂದು ಸಭೆಗೆ ತಿಳಿಸಿದರು. ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಹಿಂದೆ ಇದ್ದ ತೀರ್ಮ ಬರಹಾಗಾರರನ್ನು ಮತ್ತು ಸಿಬ್ಬಂದಿಯವರನ್ನು ಸಂಪರ್ಕಿಸಿ ಮಾಹಿತಿ ಪಡೆದು ಕಡತಗಳನ್ನು ಹುಡುಕಿಸಬೇಕೆಂದು ತಿಳಿಸಿದರು.

**(ಕ್ರಮ : ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ ಮತ್ತು ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್ ಶ್ರೀನಿವಾಸ್)**

**ವಿಷಯ : 2 ವಾರ್ಷಿಕ ವರದಿ :**

ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಗಳು, ವಾರ್ಷಿಕ ವರದಿಗೆ ಸಂಬಂಧಿಸಿದಂತೆ ಹಿಂದಿನ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯದಂತೆ ಸಚಿವಾಲಯದ ಇಲಾಖಾ ಮಟ್ಟದ ಅಧಿಕಾರಿಗಳನ್ನು ಕರೆದು, ಮಾಹಿತಿ ಪ್ರಗತಿಯನ್ನು ವಿಮರ್ಶಿಸಲು ಆಯುಕ್ತರುಗಳಾದ ಶ್ರೀ. ಜೆ.ಎಸ್.ವಿರೂಪಾಕ್ಷಯ್ಯ ಮತ್ತು ಶ್ರೀ ಡಿ.ತಂಗರಾಜ್‌ರವರುಗಳನ್ನು ಕೋರಲಾಗಿದೆ ಎಂದು ತಿಳಿಸಿದ್ದು, ಈ ಕುರಿತಂತೆ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ತಮಗೆ ವಹಿಸಿರುವ ಇಲಾಖೆಗಳ ಅಧಿಕಾರಿಗಳೊಂದಿಗೆ ಪರಾಮರ್ಶಿಸುವ ದಿನಾಂಕಗಳನ್ನು ನೀಡಿರುವುದಾಗಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ ಡಿ.ತಂಗರಾಜ್‌ರವರು ತಾವು ಈಗಾಗಲೇ ಸಂಬಂಧಪಟ್ಟ ಇಲಾಖೆಗಳ ಮಾಹಿತಿ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಕೂಡಲೇ ಮಾಹಿತಿ ಒದಗಿಸುವಂತೆ ಸೂಚಿಸಿರುವುದಾಗಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು ದೂರವಾಣಿ ಮೂಲಕ ಸೂಚಿಸುವುದಕ್ಕಿಂತಲೂ ಅವರನ್ನು ಖುದ್ದಾಗಿ ಕರೆದು ಪರಾಮರ್ಶಿಸಿ ಅಗತ್ಯ ಮಾಹಿತಿಯನ್ನು ಒದಗಿಸಲು ಸೂಚಿಸುವುದು ಸೂಕ್ತವಾಗಿದ್ದು, ಅದರಂತೆ ಪ್ರತಿ ದಿನ ಎರಡು ಇಲಾಖೆಗಳ ಅಧಿಕಾರಿಗಳನ್ನು ಕರೆದು ವಿರ್ಮಶಿಸಲು ಸೂಚನೆ ನೀಡಿದರು.

**ನಿರ್ಣಯ : ದಿನಾಂಕ: 7.6.2013ರ ಕಚೇರಿ ಟಿಪ್ಪಣಿಯನ್ವಯ ಮಾಹಿತಿ ಆಯುಕ್ತರುಗಳಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯ ಮತ್ತು ಶ್ರೀ ಡಿ.ತಂಗರಾಜ್ ಅವರುಗಳು ಪ್ರತಿ ದಿನ ಇಬ್ಬರು ಅಧಿಕಾರಿಗಳನ್ನು ಕರೆದು ಪರಮಾರ್ಶಿಸಲು ಒಪ್ಪಿರುತ್ತಾರೆ.**

**ಹಳೇವರ್ಷಗಳ ಬಾಕಿ ಉಳಿದಿರುವ 239 ಪ್ರಕರಣಗಳನ್ನು 2012–13ನೇ ಸಾಲಿಗೆ ಬಾಕಿ ಪ್ರಕರಣಗಳೆಂದು ನಮೂದಿಸಿ, ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು ಮತ್ತು 2013–14ನೇ ಸಾಲಿಗೆ ಸದರಿ ಪ್ರಕರಣಗಳನ್ನು** 'carry forward' ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

**(ಕ್ರಮ : ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ಪ್ರೋಗ್ರಾಮರ್, ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್)**

**ಕಡತ ನಾಶಪಡಿಸುವ ಕ್ರಿಯೆ :**ಈ ಬಗ್ಗೆ ಮಾತನಾಡಿದ ಮಾಹಿತಿ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಹಿಂದಿನ ಸಭೆಯಲ್ಲಿ ತೀರ್ಮಾನಿಸಿದಂತೆ ಮೂರು ವರ್ಷಗಳ ಅವಧಿ ಮೀರಿದ ಕಡತಗಳ ನಾಶಪಡಿಸುವಿಕೆಯ ಕಾರ್ಯಪ್ರಗತಿಯ ಬಗ್ಗೆ ಸಭೆಯಲ್ಲಿ ಕೇಳಲಾಗಿ ಇದಕ್ಕೆ ಉತ್ತರಿಸಿದ ಕಾರ್ಯದರ್ಶಿಗಳು ಈಗಾಗಲೇ ಕಾರ್ಯವು ಪ್ರಗತಿಯಲ್ಲಿರುವುದಾಗಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸುತ್ತಾ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಎಂ.ಎಸ್.ಬಿಲ್ಡಿಂಗ್‌ನಲ್ಲಿ ಕಡತಗಳನ್ನು ಸಂರಕ್ಷಿಸಲು ಹೆಚ್ಚಿನ

ಸ್ಥಳಾವಕಾಶಕ್ಕಾಗಿ ಕೊಠಡಿಗಳನ್ನು ಕಾಯ್ದಿರಿಸುವ ಬಗ್ಗೆ ಪ್ರಸ್ತಾಪಿಸುತ್ತಾ ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಮುಖೇನ ಕೋರಿ ಕೂಡಲೇ ಕೊಠಡಿಗಳನ್ನು ಆಯೋಗದ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

**ನಿರ್ಣಯ : ಆಯೋಗದ ಪ್ರಕರಣಗಳ ಕಡತಗಳನ್ನು ಸಂಗ್ರಹಿಸುವ ಸಲುವಾಗಿ ಎಂ.ಎಸ್.ಬಿಲ್ಡಿಂಗ್‌ನಲ್ಲಿ ಖಾಲಿಯಿರುವ ಕೊಠಡಿಗಳನ್ನು ಆಯೋಗದ ವಶಕ್ಕೆ ಪಡೆಯುವ ಸಲುವಾಗಿ ಮುಖ್ಯಕಾರ್ಯದರ್ಶಿಗಳ ಅನುಮತಿ ಪಡೆಯುವುದು.**
**(ಕ್ರಮ : ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)**

**ವಿಷಯ : 3 ಟೆಂಡರ್ ಕಮಿಟಿಗಳನ್ನು ರಚಿಸುವ ಬಗ್ಗೆ:**

ಈ ಬಗ್ಗೆ ವಿಷಯ ಪ್ರಸ್ತಾಪಿಸಿದ ಕಾರ್ಯದರ್ಶಿಯವರು ಆಯೋಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಒದಗಿಸುತ್ತಿರುವ ಏಜೆನ್ಸಿಯವರ ಟೆಂಡರ್ ಅವಧಿಯು ಮುಕ್ತಾಯಗೊಂಡಿದ್ದು ಹೊಸದಾಗಿ ಟೆಂಡರ್ ಕರೆಯುವ, ಪರಿಶೀಲಿಸುವ ಮತ್ತು ಟೆಂಡರ್ ಅನ್ನು ಅಂಗೀಕರಿಸುವ ಸಲುವಾಗಿ ಕೆ.ಟಿ.ಟಿ.ಪಿ. ಕಾಯ್ದೆಯನ್ವಯ ಟೆಂಡರ್ ಕರೆಯುವ, ಪರಿಶೀಲಿಸುವ ಸಮಿತಿ ಮತ್ತು ಟೆಂಡರ್ ಅನ್ನು ಅಂಗೀಕರಿಸುವ 2 ಸಮಿತಿಗಳನ್ನು ಈ ಕೆಳಕಂಡಂತೆ ರಚಿಸಬೇಕಾಗಿದೆ.

**ಟೆಂಡರ್ ಕರೆಯುವ/ಪರಿಶೀಲಿಸುವ ಕಮಿಟಿಯ ಸದಸ್ಯರುಗಳು**

| | | | |
|---|---|---|---|
| 1) | ಕರ್ನಾಟಕ ಮಾಹಿತಿ ಆಯೋಗದ ಕಾನೂನು ಅಧಿಕಾರಿಗಳು | – | ಅಧ್ಯಕ್ಷರು |
| 2) | ಶ್ರೀ.ಲಕ್ಷ್ಮೀಶ, ಎನ್.ಐ.ಸಿ. ಸಂಸ್ಥೆಯ ತಾಂತ್ರಿಕ ನಿರ್ದೇಶಕರು | – | ಸದಸ್ಯರು |
| 3) | ಇ-ಗರ್ವನೆನ್ಸ್ ಸಂಸ್ಥೆಯ ಪ್ರತಿನಿದಿ (ಉಪ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿ) | – | ಸದಸ್ಯರು |
| 4) | ಇ-ಗರ್ವನೆನ್ಸ್ ಸಂಸ್ಥೆಯ ಸಹಾಯಕ ನಿಯಂತ್ರಕರು (ಲೆಕ್ಕಪತ್ರ) | – | ಸದಸ್ಯರು |
| 5) | ಅಧೀನ ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ | – | ಸಂಚಾಲಕರು(convener) /ಸದಸ್ಯರು |

**ಟೆಂಡರ್ ಸ್ವೀಕರಿಸುವ ಕಮಿಟಿಯ ಸದಸ್ಯರುಗಳು**

| | | | |
|---|---|---|---|
| 1) | ಕರ್ನಾಟಕ ಮಾಹಿತಿ ಆಯೋಗದ ಕಾರ್ಯದರ್ಶಿಗಳು | – | ಅಧ್ಯಕ್ಷರು |
| 2) | ಇ-ಗರ್ವನೆನ್ಸ್ ಸಂಸ್ಥೆಯ ಪ್ರತಿನಿಧಿ (ಉಪ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿ) | – | ಸದಸ್ಯರು |
| 3) | ಇ-ಗರ್ವನೆನ್ಸ್ ಸಂಸ್ಥೆಯ ಸಹಾಯಕ ನಿಯಂತ್ರಕರು (ಲೆಕ್ಕಪತ್ರ) | – | ಸದಸ್ಯರು |
| 4) | ಅಧೀನ ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ | – | ಸದಸ್ಯರು |
| 5) | ಎನ್.ಐ.ಸಿ. ಸಂಸ್ಥೆಯ ಪ್ರತಿನಿಧಿ | – | ಸದಸ್ಯರು |
| 6) | ಡಿ.ಪಿ.ಎ.ಆರ್. (ಜನಸ್ಪಂದನ)ನ ಪ್ರತಿನಿಧಿ (ಅಧೀನ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿ) | – | ಸದಸ್ಯರು |
| 7) | ಕರ್ನಾಟಕ ಮಾಹಿತಿ ಆಯೋಗದ ಕಾನೂನು ಅಧಿಕಾರಿಗಳು | – | ಸಂಚಾಲಕರು(convener) /ಸದಸ್ಯರು |

ಸದರಿ ಸಮಿತಿಯನ್ನು ರಚಿಸಲು ಅಗತ್ಯವಾದ ಅನುಮತಿ ಪಡೆಯಲು ಹಾಗೂ ಆಯಾ ಇಲಾಖೆ ಅಧಿಕಾರಿಗಳನ್ನು ಕೋಆಪ್ಟ್ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಮತ್ತು ಎನ್.ಐ.ಸಿ.ಯ ಮುಖ್ಯಸ್ಥರು ಕೋರಿರುವ ಅಧಿಕಾರಿಯವರ ಸೇವೆಯನ್ನು ನೀಡುವಂತೆ ಕೋರಬಹುದು ಎಂದು ಸಭೆಯ ಅನುಮತಿಯನ್ನು ಕಾರ್ಯದರ್ಶಿಯವರು ಕೋರಿದರು.

ನಿರ್ಣಯ : ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ಪಡೆಯುವ ಸಲುವಾಗಿ ಹಾಗೂ ಆಯೋಗದ ಯಾವುದೇ ಖರೀದಿ ಪ್ರಕ್ರಿಯೆ ಮಾಡಲು ಏಜೆನ್ಸಿಗಳಿಂದ ಟೆಂಡರ್ ಕರೆಯುವ / ಪರಿಶೀಲಿಸುವ ಸಮಿತಿ ಮತ್ತು ಟೆಂಡರ್ ಅಂಗೀಕರಿಸುವ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿಯನ್ನು ಅಂಗೀಕರಿಸಲಾಗಿ ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆಯುವುದು.
ಕ್ರಮ : ಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳು.

**ವಿಷಯ 4 : Cause list ಗಳನ್ನು ವೆಬ್‌ಸೈಟ್ ಮತ್ತು ನೋಟೀಸ್ ಬೋರ್ಡ್‌ಗಳಲ್ಲಿ ಪ್ರಕಟಿಸುವ ಬಗ್ಗೆ:**

ವಿಷಯವನ್ನು ಕಾರ್ಯದರ್ಶಿಗಳು ಸಭೆಯ ಮುಂದೆ ಪ್ರಸ್ತಾಪಿಸಲಾಗಿ, ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀಜೆ.ಎಸ್.ವಿರೂಪಾಕ್ಷಯ್ಯರವರು 'ಕಾಸ್ ಲಿಸ್ಟ್' ಅನ್ನು ವೆಬ್‌ಸೈಟ್ ಮತ್ತು ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸುವುದು ಸೂಕ್ತವಾಗಿದ್ದು, ಆದರೆ ನೋಟೀಸ್ ಬೋರ್ಡ್‌ನಲ್ಲಿ ಕಾಸ್ ಲಿಸ್ಟ್‌ಗಳನ್ನು ಪ್ರಕಟಿಸುವಾಗ ಸಹಿ ಇಲ್ಲದೆ ಪ್ರಕಟಿಸುತ್ತಿದ್ದು ಇನ್ನು ಮುಂದೆ ಆಯೋಗದ ಅಧೀನ ಕಾರ್ಯದರ್ಶಿಗಳ ಸಹಿಯುಳ್ಳ 'ಕಾಸ್ ಲಿಸ್ಟ್'ಗಳನ್ನು ಪ್ರಕಟಿಸಬೇಕೆಂದು ತಿಳಿಸಿದರು.

**ನಿರ್ಣಯ : Cause list ಗಳನ್ನು ವೆಬ್‌ಸೈಟ್ ಮತ್ತು ನೋಟೀಸ್ ಬೋರ್ಡ್‌ಗಳಲ್ಲಿ ಪ್ರಕಟಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ಅಧೀನ ಕಾರ್ಯದರ್ಶಿಯವರ ಸಹಿಯುಳ್ಳ Cause list ಗಳನ್ನು ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಪಡಿಸುವುದು.**

**(ಕ್ರಮ : ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು, ಪ್ರೋಗ್ರಾಮರ್)**

**ವಿಷಯ 5 : ದಂಡ ಹಿಂಪಡೆಯುವ ಪ್ರಕರಣಗಳನ್ನು ಪಿ.ಎಲ್.ಓ.ನಲ್ಲಿ ನಮೂದಿಸುವ ಬಗ್ಗೆ.**

ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಯವರು ಕೆಲವು ಪ್ರಕರಣಗಳಲ್ಲಿ ದಂಡ ವಿಧಿಸಿ ತದನಂತರ ಸದರಿ ಆದೇಶವನ್ನು ಹಿಂಪಡೆದಿದ್ದು, ಅಂತಹ ಪ್ರಕರಣಗಳನ್ನು ಪಿ.ಎಲ್.ಓ.ನಲ್ಲಿ ನಮೂದಿಸಲು ಎನ್.ಐ.ಸಿ.ಯವರೊಡನೆ ಸಭೆ ನಡೆಸಲಾಗಿದ್ದು, ಅದರಂತೆ ನಮೂದಿಸಲು ಸಭೆಯ ಅನುಮತಿ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀಡಿ.ತಂಗರಾಜ್ ಅವರು, ದಂಡ ವಿಧಿಸಿದ ಪ್ರಕರಣಗಳಲ್ಲಿ ಕೆಲವೊಮ್ಮೆ ಸಂಬಂಧಪಟ್ಟ ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ವರ್ಗಾವಣೆಗೊಂಡಿದ್ದು / ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಪ್ರಸ್ತುತ ಇರುವ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ದಂಡ ವಿಧಿಸಲಾಗಿರುತ್ತದೆ. ಅಂತ ಪ್ರಕರಣಗಳನ್ನು ಮುಂದೂಡಿ ಪೀರ್ಯಾದು ನೀಡಿದ ಸಂದರ್ಭದಲ್ಲಿ ಇದ್ದ ಅಧಿಕಾರಿಗೆ ದಂಡ ವಿಧಿಸುವಂತೆ ಹೊಸದಾಗಿ ಆದೇಶ ಹೊರಡಿಸಲಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಪಿ.ಎಲ್.ಓ.ನಲ್ಲಿ ಪ್ರತ್ಯೇಕ ಕಾಲಂ ಅಡಿಯಲ್ಲಿ ದಂಡ ವಿಧಿಸಿರುವ ಮತ್ತು ದಂಡ ಹಿಂಪಡೆದಿರುವುದನ್ನು ನಮೂದಿಸಬೇಕು ಎಂದು ತಿಳಿಸಿದರು.

**ನಿರ್ಣಯ : ದಂಡ ಹಿಂಪಡೆಯುವ ಪ್ರಕರಣಗಳನ್ನು ಪಿ.ಎಲ್.ಓ.ನಲ್ಲಿ ಪ್ರತ್ಯೇಕ ಕಾಲಂ ಅಡಿಯಲ್ಲಿ ನಮೂದಿಸಲು ಅಗತ್ಯ ಕ್ರಮ** ಕೈಗೊಳ್ಳುವುದು.

**(ಕ್ರಮ : ಅಧೀನ ಕಾರ್ಯದರ್ಶಿ, ಪ್ರೋಗ್ರಾಮರ್)**

**ಇತರೆ ವಿಷಯಗಳು :**

- ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಮಾತನಾಡಿದ ಆಯುಕ್ತರಾದ ಶ್ರೀಡಿ.ತಂಗರಾಜ್‌ರವರು, ಆಯೋಗದ ವತಿಯಿಂದ ಜುಲೈ ತಿಂಗಳಿನಲ್ಲಿ ನಡೆಸಲು ಉದ್ದೇಶಿಸಿರುವ ವಿಡಿಯೋ ಕಾನ್ಫರೆನ್ಸ್‌ಗೆ ಸಂಬಂಧಿಸಿದಂತೆ ಇ-ಗವರ್ನೆನ್ಸ್ ಇಲಾಖೆಯವರು slot ಒದಗಿಸುವುದಕ್ಕೆ ಸಂಬಂಧಿಸಿದಂತೆ ಸದರಿ ಇಲಾಖೆಯ ಕಾರ್ಯದರ್ಶಿಯವರು ಆಯೋಗದ ಮುಖ್ಯ ಆಯುಕ್ತರೊಡನೆ ಚರ್ಚಿಸುತ್ತಾರೆಂದು ತಿಳಿಸಿರುತ್ತಾರೆ. ಆದರೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಈಗಾಗಲೇ ಎಲ್ಲರಿಗೂ ನೋಟೀಸ್ ನೀಡಲಾಗಿದ್ದು, ಜುಲೈ ತಿಂಗಳಲ್ಲಿ ವಿಡಿಯೋ ಕಾನ್ಫರೆನ್ಸ್‌ಗೆ ಸ್ಲಾಟ್ ನೀಡದಿದ್ದಲ್ಲಿ ತೊಂದರೆಯಾಗಲಿದ್ದು, ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ಆಯುಕ್ತರು ವಿಡಿಯೋ ಕಾನ್ಫರೆನ್ಸ್ ನಡೆಸುವಾಗ ಸಂಬಂಧಪಟ್ಟ ಜಿಲ್ಲೆಯಲ್ಲಿ ಪೀರ್ಯಾದುದಾರರು ಪ್ರತಿವಾದಿಗಳು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಎಲ್ಲರೂ ಹಾಜರಿರುತ್ತಾರೆ, ಆರ್.ಟಿ.ಐ.ಗೆ ಸಂಬಂಧಿಸಿದಂತೆ ಆಯೋಗದಿಂದ ಕೇವಲ ಅರ್ಧ ದಿನದವರೆಗೆ ವಿಡಿಯೋ ಕಾನ್ಫರೆನ್ಸ್ ಸ್ಲಾಟ್ ನಿಗದಿಪಡಿಸಲಾಗಿದ್ದು, ಮಧ್ಯಾಹ್ನದ ನಂತರ ಬೇರೆಯವರಿಗೆ ಸ್ಲಾಟ್ ನೀಡಲು ಇ-ಗವರ್ನೆನ್ಸ್‌ರವರಿಗೆ ತಿಳಿಸಬೇಕೆಂದು ಸೂಚಿಸಿದರು. ಮುಂದುವರೆದು, ಈ ಬಗ್ಗೆ ಇ-ಗವರ್ನೆನ್ಸ್ ಅಧಿಕಾರಿಯವರು ಮುಖ್ಯ ಆಯುಕ್ತರೊಡನೆ ಚರ್ಚಿಸುವಂತೆ ತಿಳಿಸಲು ಸಹ ಸೂಚಿಸಿದರು. ಕೆಲವು ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ವಿಡಿಯೋ ಕಾನ್ಫರೆನ್ಸ್ ನಡೆಸುತ್ತಿದ್ದಲ್ಲಿ ಅಂತಹ ಸಂದರ್ಭದಲ್ಲಿ ದಿನಾಂಕವನ್ನು ಮುಂದೂಡಬಹುದಾಗಿರುತ್ತದೆ ಅಥವಾ ಅವರ ಸ್ಲಾಟ್ ಮುಗಿದ ನಂತರ ನಮಗೆ ಸ್ಲಾಟ್ ನೀಡಬಹುದಾಗಿರುತ್ತದೆ. ಈ ಬಗ್ಗೆ ಕೂಡಲೇ ಕ್ರಮ ವಹಿಸುವಂತೆ ಸೂಚಿಸಿದರು.

ನಿರ್ಣಯ: ಇ-ಗವರ್ನೆನ್ಸ್ ಇಲಾಖೆಯ ಕಾರ್ಯದರ್ಶಿಗಳನ್ನು ಮುಖ್ಯ ಆಯುಕ್ತರೊಡನೆ ಚರ್ಚಿಸಿ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರುವುದು.

**(ಕ್ರಮ : ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)**

- **ಆಯೋಗದ ನೂತನ ಕಟ್ಟಡದ ಪ್ರಗತಿ ಕಾರ್ಯ :** ವಿಷಯ ಪ್ರಸ್ತಾಪಿಸಿದ ಆಯುಕ್ತರಾದ ಶ್ರೀಜೆ.ಎಸ್.ವಿರೂಪಾಕ್ಷಯ್ಯರವರು ಕಟ್ಟಡ ಕಾಮಗಾರಿಯು ಕುಂಠಿತವಾಗಿದ್ದು, ಈ ಬಗ್ಗೆ ನಿಯತವಾಗಿ ಪರಿಶೀಲಿಸಬೇಕೆಂದು ತಿಳಿಸಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ಆಯುಕ್ತರು ಈ ಬಗ್ಗೆ ಕೂಡಲೇ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಮುಖ್ಯ ಇಂಜಿನಿಯರ್‌ರವರು ಮತ್ತು ಅಧಿಕಾರಿಗಳು ತಮ್ಮನ್ನು ಭೇಟಿ ಮಾಡಿ ಪ್ರಗತಿ ವರದಿ ನೀಡಲು ಸೂಚಿಸಬೇಕೆಂದು ತಿಳಿಸಿದರು.
  **(ಕ್ರಮ : ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)**

- **ಹೊರಗುತ್ತಿಗೆ ನೌಕರರ ಸಂಬಳದ ಬಗ್ಗೆ :** ವಿಷಯ ಪ್ರಸ್ತಾಪಿಸಿದ ಆಯುಕ್ತರಾದ ಶ್ರೀಡಿ.ತಂಗರಾಜ್‌ರವರು ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಪ್ರತಿ ತಿಂಗಳು 15ನೇ ತಾರೀಖಿನ ನಂತರ ಸಂಬಳ ಪಾವತಿಯಾಗುತ್ತಿದ್ದು ಈ ರೀತಿಯ ವಿಳಂಬವನ್ನು ತಡೆಯಬೇಕೆಂದು ತಿಳಿಸಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ಆಯುಕ್ತರು ಏಜೆನ್ಸಿಯವರಿಗೆ ಈ ಕುರಿತು ಸೂಚನೆ ನೀಡಿ ವೇತನವನ್ನು ನಿಗದಿತ ಸಮಯದೊಳಗೆ ಪಾವತಿಸಲು ಸೂಚಿಸಬೇಕೆಂದು ತಿಳಿಸಿದರು ಮತ್ತು ಇದರ ಜೊತೆಯಲ್ಲಿಯೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪತ್ರ ಬರೆದು ಖಾಯಂ ನೌಕರರನ್ನು ಆಯೋಗಕ್ಕೆ ನಿಯೋಜಿಸುವಂತೆ ಕೋರಲು ಸೂಚಿಸಿದರು.
  **(ಕ್ರಮ : ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)**

- **ಎಂಎಸ್‌ಡಬ್ಲ್ಯು ಪದವೀಧರರಿಗೆ ಅಯೋಗದಲ್ಲಿ Internship ಅಗಿ ಕೆಲಸಮಾಡಲು ಅನುಮತಿ ನೀಡುವ ಬಗ್ಗೆ:** ಈ ವಿಷಯ ಪ್ರಸ್ತಾಪಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜ್‌ರವರು ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಎಂ.ಎಸ್.ಡಬ್ಲ್ಯು ಪದವಿ ಪಡೆದ ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಆಧಾರದಲ್ಲಿ ಆಯೋಗದಲ್ಲಿ ತರಬೇತಿ ಪಡೆಯಲು ಇಚ್ಛಿಸಿರುವುದಾಗಿ ತಿಳಿಸಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ಆಯುಕ್ತರು ಈ ರೀತಿ ಎಂ.ಎಸ್.ಡಬ್ಲ್ಯು ಪದವಿ ವಿಧ್ಯಾರ್ಥಿಗಳು ಇಂಟರ್ನ್‌ಶಿಪ್‌ಗಾಗಿ ಆಯೋಗದಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಬಹುದೆಂದು ಹೇಳಿದರು ಅಂತಹವರಲ್ಲಿ 4 ಜನ ಪದವೀಧರರನ್ನು ಆಯೋಗದ ಕಾನೂನು ಅಧಿಕಾರಿಗಳ ಕಛೇರಿಯಲ್ಲಿ ಇಂಟರ್ನ್‌ಶಿಪ್ ತರಬೇತಿ ಪಡೆಯಲು ಅವಕಾಶ ನೀಡಬಹುದೆಂದು ನಿರ್ಣಯಿಸಲಾಯಿತು.
  **(ಕ್ರಮ : ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)**

- **ಮಾಹಿತಿ ಆಯೋಗದ ಅಧಿಕಾರಿಗಳು Respondent ಆಗಿರುವ ಪ್ರಕರಣಗಳ ಬಗ್ಗೆ :** ವಿಷಯ ಪ್ರಸ್ತಾಪಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಆಯೋಗದ ಸಾರ್ವಜನಿಕ ಮಾಹಿತಿ ಅಧಿಕಾರಿಯು Respondent ಆಗಿರುವ ಪ್ರಕರಣಗಳಲ್ಲಿ ಆಯೋಗದ ಅಧೀನ ಕಾರ್ಯದರ್ಶಿ / ಶಾಖಾಧಿಕಾರಿಗಳು ಕೋರ್ಟ್‌ನಲ್ಲಿ ಹಾಜರಿರದೆ ಇರುವುದು ಕಂಡು ಬಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸುವಂತೆ ಹಾಗೂ ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳಬೇಕೆಂದು ಸಭೆಗೆ ತಿಳಿಸಿದರು. ಇದಕ್ಕೆ ಉತ್ತರಿಸಿದ ಕಾರ್ಯದರ್ಶಿಯವರು ಅಂತಹ ಪ್ರಕರಣಗಳಲ್ಲಿ ಹಾಜರಿರಬೇಕಿದ್ದ ಅಧೀನ ಕಾರ್ಯದರ್ಶಿಯವರು ವರ್ಗಾವಣೆಯಾಗಿದ್ದು, ಶಾಖಾಧಿಕಾರಿಯಾಗಿ ಹೊಸದಾಗಿ ಬಂದಿರುವ ಅಧಿಕಾರಿಯನ್ನೇ ಪ್ರಭಾರದಲ್ಲಿರಿಸಲಾಗಿದ್ದು ಇನ್ನು ಮುಂದೆ ನಿಯಮಿತವಾಗಿ ಹಾಜರಿದ್ದು ಅಗತ್ಯ ಮಾಹಿತಿ ಒದಗಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ಆಯುಕ್ತರು ಆಯೋಗದ ಅಧಿಕಾರಿಗಳೇ ಈ ರೀತಿ ಮಾಡುವುದು ಸರಿಯಲ್ಲವಾದ್ದರಿಂದ ಕೂಡಲೇ ಈ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿದರು.

  **(ಕ್ರಮ : ಕಾರ್ಯದರ್ಶಿ** ಹಾಗೂ ಅಧೀನ **ಕಾರ್ಯದರ್ಶಿ ಮತ್ತು PIO ಅಗತ್ಯ ಕ್ರಮಕ್ಕಾಗಿ)**

**ವಿಷಯ 6 : 18(ಎ) 18(ಬಿ) ನಮೂನೆ :**

ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಯವರು ಕಾನೂನು ಅಧಿಕಾರಿಗಳು ಸಿದ್ಧಪಡಿಸಿರುವ ನಮೂನೆಯನ್ನು ಭಾಷಾಂತರ ಇಲಾಖೆಯಿಂದ ಭಾಷಾಂತರಿಸಿದ ಕರಡು ಪ್ರತಿಯನ್ನು ಸಭೆಯ ಮುಂದೆ ಪ್ರಸ್ತುತಪಡಿಸಿದರು. ಇದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ತಿದ್ದುಪಡಿಗಳನ್ನು ಅಳವಡಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

- ಮೇಲ್ಮನವಿ ಹಾಗೂ ಅಡಕಗಳ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು : ಎಂದು ನಮೂದಿಸುವುದು
- 'ಖುದ್ದು ಹಾಜರಾತಿ' : ಎಂದು ನಮೂದಿಸುವುದು.
- ಪೀರ್ಯಾದಿ ಬದಲಿಗೆ 'ಪೀರ್ಯಾದುದಾರ' ಎಂದು ನಮೂದಿಸುವುದು.

ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳನ್ವಯ ಸೂಕ್ತ ಕ್ರಮ ವಹಿಸಿ ಪ್ರಗತಿಯ ಬಗ್ಗೆ ಮಾಹಿತಿ ನೀಡುವಂತೆ ಕಾರ್ಯದರ್ಶಿಯವರಿಗೆ ಸೂಚಿಸುತ್ತಾ ಮುಖ್ಯ ಆಯುಕ್ತರು ಸಭೆಯನ್ನು ಮುಕ್ತಾಯಗೊಳಿಸಿದರು.

ಮುಖ್ಯ ಮಾಹಿತಿ ಆಯುಕ್ತರು

## ಅನುಭಂದ – 'ಅ'

## ದಿನಾಂಕ:13/06/2013ರಂದು ಕರ್ನಾಟಕ ಮಾಹಿತಿ ಆಯೋಗದಲ್ಲಿ ನಡೆದ ಸಭೆಯಲ್ಲಿ ಕೆಳಕಂಡವರು ಉಪಸ್ಥಿತರಿದ್ದರು

1) ಶ್ರೀ ಎ.ಕೆ.ಎಮ್.ನಾಯಕ್– ಮುಖ್ಯ ಮಾಹಿತಿ ಆಯುಕ್ತರು ಕ.ಮಾ.ಆ

2) ಶ್ರೀ ಜೆ.ಎಸ್.ವಿರೂಪಾಕ್ಷಯ್ಯ– ಮಾಹಿತಿ ಆಯುಕ್ತರು ಕ.ಮಾ.ಆ

3) ಶ್ರೀ ಡಿ.ತಂಗರಾಜ್– ಮಾಹಿತಿ ಆಯುಕ್ತರು ಕ.ಮಾ.ಆ

4) ಶ್ರೀ ಎಮ್.ಆರ್.ಪೂಜಾರ್– ಮಾಹಿತಿ ಆಯುಕ್ತರು ಕ.ಮಾ.ಆ

5) ಶ್ರೀ ಟಿ.ರಾಮ ನಾಯಕ್– ಮಾಹಿತಿ ಆಯುಕ್ತರು ಕ.ಮಾ.ಆ

6) ಡಾ. ಎಸ್.ಡಿ.ಸಜ್ಜನರ್– ಮಾಹಿತಿ ಆಯುಕ್ತರು ಕ.ಮಾ.ಆ

7) ಶ್ರೀ ಚಿಕ್ಕಮುನಿಯಪ್ಪ– ಕಾರ್ಯದರ್ಶಿ ಕ.ಮಾ.ಆ

8) ಶ್ರೀ ಬಿ.ಶ್ರೀರಾಮ ರೆಡ್ಡಿ– ಕಾನೂನು ಅಧಿಕಾರಿ ಕ.ಮಾ.ಆ

9) ಶ್ರೀಮತಿ ವಿ.ನೀಲಾ– ಅಧೀನ ಕಾರ್ಯದರ್ಶಿ (ಪ್ರ) ಕ.ಮಾ.ಆ

10) ಶ್ರೀಮತಿ ಪಿ.ವಿ.ಮುದ್ದುರತ್ನಮ್ಮ– ಕಾರ್ಯದರ್ಶಿಯವರ ಆಪ್ತ–ಕಾರ್ಯದರ್ಶಿ ಕ.ಮಾ.ಆ

11) ಶ್ರೀ ಕೆ.ಶೀನಿವಾಸ್– ಸಹಾಯಕ ಸಾಂಖ್ಯಿಕ ಅಧಿಕಾರಿ ಕ.ಮಾ.ಆ